ಮನುಷ್ಯರಲ್ಲಿ ಇದ್ದ ತರತಮ ಭಾವನೆ ಹಾಗೂ ಘೋರವಾದ ಅಸ್ಪೃಶ್ಯತಾ ಆಚರಣೆಯ ಬಗ್ಗೆ ಹೆಚ್ಚು ಗಮನವನ್ನು ಕೊಡಲಿಲ್ಲ. ಆದರೆ ಅಂಬೇಡ್ಕರ್ ಅವರು ಅಸ್ಪೃಶ್ಯತಾ ಸಮಸ್ಯೆಯನ್ನು ಒಂದು ರಾಷ್ಟ್ರೀಯ ಸಮಸ್ಯೆ ಎಂದು ಒತ್ತಿ ಒತ್ತಿ ಹೇಳಿದರಲ್ಲದೆ ಅದರ ನಿವಾರಣೆಗೆ ಹೋರಾಟವನ್ನು ರಾಷ್ಟ್ರೀಯ ಮಟ್ಟದಲ್ಲಿ ರೂಪಿಸಿದರು.

ಅಂಬೇಡ್ಕರ್ ಅವರ ಈ ಹೋರಾಟ ತೀವ್ರಗೊಳ್ಳುವುದನ್ನು ಕಂಡ ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯತಾ ನಿವಾರಣಾ ಸಮಸ್ಯೆಯನ್ನು ಕೈಗೆತ್ತಿಕೊಂಡು ಕಾರ್ಯಕ್ರಮಗಳನ್ನು ರೂಪಿಸಿದರು. ಅಸ್ಪೃಶ್ಯರನ್ನು 'ಹರಿಜನ' ಎಂದು ಕರೆದಿದ್ದಲ್ಲದೆ, 'ಹರಿಜನ' ಪತ್ರಿಕೆಯನ್ನು ತಂದರು. ಸ್ವಾತಂತ್ರ್ಯ ಚಳವಳಿ ಜೊತೆಗೆ 'ಹರಿಜನೋದ್ಧಾರ' ಕಾರ್ಯಕ್ರಮ ರೂಪಿಸಿದ್ದರಿಂದಾಗಿ ಅದು ಕಾಂಗ್ರೆಸ್ ಹೋರಾಟವಾಗಿ ಪರಿವರ್ತನೆಯಾಗಿ ಇಡೀ ದೇಶಾದ್ಯಂತ ಹರಿಜನೋದ್ಧಾರವೆಂದರೆ ಕಾಂಗ್ರೆಸ್ ಮತ್ತು ಗಾಂಧಿ ಎಂಬಂತಾಗಿಬಿಟ್ಟಿತು. ಗಾಂಧೀಜಿ ಮತ್ತು ಕಾಂಗ್ರೆಸ್ ಅಸ್ಪೃಶ್ಯರಿಗೆ ಮಾಡಿದ್ದೇನು ಎಂಬ ವಿವರಗಳನ್ನು ಸೋದಾಹರಣವಾಗಿ ಅಂಬೇಡ್ಕರ್ ದಾಖಲಿಸಿದರು. ಇದು ದೇಶವ್ಯಾಪಿ ಪ್ರಚಾರವನ್ನು ಪಡೆಯಿತಾದರು ರಾಷ್ಟ್ರೀಯ ಕಾಂಗ್ರೆಸ್ ಮತ್ತು ಅದರ ಪ್ರಧಾನ ಉದ್ದೇಶವಾದ ಸ್ವಾತಂತ್ರ್ಯ ಹೋರಾಟದೊಂದಿಗೆ ಅಸ್ಪೃಶ್ಯತಾ ವಿರೋಧಿ ಚಳವಳಿ ಬೆಸೆದುಕೊಂಡಿತು. ಗಾಂಧೀಜಿ ಅಸ್ಪೃಶ್ಯರ ಉದ್ಧಾರಕ್ಕೆ ಶ್ರಮಿಸುತ್ತಿದ್ದಾರೆಂಬ ಭಾವನೆ ಮುನ್ನೆಲೆಗೆ ಬಂದಿತು.

ಗಾಂಧಿ ಮತ್ತು ಅಂಬೇಡ್ಕರ್ ಆಧುನಿಕ ಭಾರತದ ವಿಶಿಷ್ಟವಾದ ತತ್ವಜ್ಞಾನಿಗಳು ಮತ್ತು ಜನನಾಯಕರು. ಇಬ್ಬರೂ ಭಾರತೀಯ ಸಮಾಜದಲ್ಲಿ ಏಕತೆ, ಸಮಾನತೆ, ಸಹ ಬಾಳ್ವೆಗಾಗಿ ಚಿಂತಿಸಿದವರು. ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಿಗೆ ತಮ್ಮದೇ ಆದ ಚಿಂತನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಬೇಕೆಂದು ಶ್ರಮಿಸಿದವರು. ಇಬ್ಬರೂ ಬರವಣಿಗೆಗಳ ಮೂಲಕವೇ ಹೆಚ್ಚಾಗಿ ಜನರನ್ನು ತಲುಪಲು ಅಸ್ತ್ರವನ್ನಾಗಿಸಿಕೊಂಡರು. ಇಬ್ಬರೂ ಪ್ರಕಾಂಡ ಪಂಡಿತರು, ವಿದ್ವಾಂಸರು ಮತ್ತು ಜ್ಞಾನಿಗಳಾಗಿದ್ದು ಸಮಸ್ಯೆಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ವಿಶ್ಲೇಷಿಸುವ ಸಾಮರ್ಥ್ಯವುಳ್ಳವರು. ಗಾಂಧೀಜಿಯವರು ಮಂಡಿಸಿದ ಸ್ವರಾಜ್ಯದ ಪರಿಕಲ್ಪನೆಯನ್ನು ಅಂಬೇಡ್ಕರ್ ಅವರು ಬೇರೊಂದು ರೀತಿಯಲ್ಲಿ ಮಂಡಿಸುತ್ತಾರೆ. ಗಾಂಧಿಯೂ ತಮ್ಮ ನಾಯಕತ್ವದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ರೂಪಿಸುತ್ತಿದ್ದರೆ ಅಂಬೇಡ್ಕರ್ ಅವರು ತಮ್ಮ ನಾಯಕತ್ವದಲ್ಲಿ ಅಸಮಾನತೆ, ಅನ್ಯಾಯ ಶೋಷಣೆ ಮುಂತಾದವುಗಳಿಂದ ನರಳುತ್ತಿದ್ದ ಜನರ ಧ್ವನಿಯಾಗಿ ಹಿಂದೂ ಸಮಾಜದ ಅಸ್ಪೃಶ್ಯ, ದಲಿತ ಹಿಂದುಳಿದ ಜಾತಿಗಳ ಹಾಗೂ ಸ್ತ್ರೀಯರ ಹಕ್ಕುಗಳಿಗಾಗಿ ಹೋರಾಡಿ ಆ ಮೂಲಕ ಮಾನವಿಕ ನೆಲೆಯ ಸಮಾನತೆಯುಳ್ಳ, ಸಹಬಾಳ್ವೆ ಭ್ರಾತೃತ್ವವುಳ್ಳ ಸಮಾಜವನ್ನು ಸ್ಥಾಪಿಸಬೇಕೆಂದು ತಮ್ಮ ಹೋರಾಟವನ್ನು ರೂಪಿಸಿದರು. ಆಧುನಿಕ ನಾಗರಿಕತೆ ಮತ್ತು ಯಂತ್ರನಾಗರಿಕತೆಯನ್ನು ಗಾಂಧೀಜಿಯವರು ಭಾರತಕ್ಕೆ ಶಾಪ ಎಂದು ಪರಿಗಣಿಸಿದರೆ ಅಂಬೇಡ್ಕರ್ ಅವರು ಯಂತ್ರನಾಗರಿಕತೆ ಮತ್ತು ಆಧುನಿಕತೆ ಶೋಷಿತ ಸಮುದಾಯಗಳಿಗೆ ವರದಾನವಾಗಿದೆ ಎಂದು ಒತ್ತಿ ಒತ್ತಿ ಹೇಳಿದರು. ಅಂಬೇಡ್ಕರ್ ಮತ್ತು ಗಾಂಧೀಜಿಯವರು ಬೇರೆ ಬೇರೆ ಚಿಂತನಾ ಮಾರ್ಗಗಳನ್ನು ಅನುಸರಿಸಿದರೂ ಅವರ ಉದ್ದೇಶ ಭಾರತದ ಅಭಿವೃದ್ಧಿಯಾಗಿತ್ತು. ಗಾಂಧೀಜಿಯವರು ಅಂಬೇಡ್ಕರ್ ಅವರೊಂದಿಗೆ ಹಲವಾರು ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರೂ ಅಂಬೇಡ್ಕರ್ ಅವರ ವಿದ್ವತ್ತಿನ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು.

ಆದರೂ ಗಾಂಧೀಜಿಯವರು ಆ ಸಂದರ್ಭದಲ್ಲಿ ಮುನ್ನೆಲೆಗೆ ಬಂದಷ್ಟು ಅಂಬೇಡ್ಕರ್ ಬರಲಿಲ್ಲ. ಹೀಗಾಗಿ, ದೇಶೀಯ ಭಾಷೆಗಳಲ್ಲಿನ ಲೇಖಕರು ವಸಾಹಾತುಶಾಹಿ ಸಂದರ್ಭದಲ್ಲಿ ರಾಷ್ಟ್ರೀಯತೆಯನ್ನು ಒಂದು ಪ್ರಧಾನ ವಿಷಯವಾಗಿಸಿಕೊಂಡು ಅಸ್ಪೃಶ್ಯತೆ, ಜಾತಿ ವ್ಯವಸ್ಥೆಯನ್ನು ಅದರ ಅಂಗವಾಗಿಯೇ